# ‘ಶ್ರೀರಾಮಕೃಷ್ಣ ವಚನವೇದ’
# ಭಾವಧಾರೆ - 51

ಸ್ವಾಮಿ ನಿತ್ಯಸ್ಥಾನಂದ

### ಬೌದ್ಧರ ಪಾರಮಿತಾ ಭಾವನೆ

ಈ ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬೌದ್ಧಧರ್ಮದಲ್ಲಿ ಪ್ರಸ್ತಾಪಿಸಲಾದ ‘ಪಾರಮಿತಾ’ ಭಾವನೆಯನ್ನು ಉದಾಹರಿಸಬಹುದು. ಇದು ಆಧ್ಯಾತ್ಮಿಕ ಸಾಧಕದಲ್ಲಿ ಇರಬೇಕಾದ ಆರು ಗುಣಗಳಿಗೆ ಸಂಬಂಧಪಟ್ಟುದು: ೧) ದಾನ (ಉದಾರತೆ) ೨) ಶೀಲ (ನೈತಿಕತೆ) ೩) ಕ್ಷಾಂತಿ (ಸಹನಶೀಲತೆ) ೪) ವೀರ್ಯ (ಶಕ್ತಿ ಅಥವಾ ಉತ್ಸಾಹ) ೫) ಧ್ಯಾನ ೬)ಪ್ರಜ್ಞೆ (ವಿವೇಕಬುದ್ಧಿ).

**ದಾನ:** ಎಂದರೆ ಉದಾರತೆಯಿಂದ ದಾನ ಮಾಡಬೇಕು, ಪುಣ್ಯ ಸಂಪಾದನೆಗಾಗಿಯೂ ಅಲ್ಲ, ಸ್ವಪ್ರತಿಷ್ಠೆಯನ್ನು ಮೆರೆಯುವುದಕ್ಕಾಗಿಯೂ ಅಲ್ಲ, ಅಥವಾ ಹೆಸರು ಕೀರ್ತಿಗಾಗಿಯೂ ಅಲ್ಲ. ಧನ ಮುಂತಾದ ಬಾಹ್ಯ ವಸ್ತುಗಳನ್ನು ಆವಶ್ಯಕತೆ ಇದ್ದವರಿಗೆ ನೀಡುವುದು **ಭೌತಿಕದಾನ.** ನೊಂದವರಿಗೆ ಸಾಂತ್ವನ ನುಡಿಗಳಿಂದ ಸಂತೋಷವನ್ನು ಉಂಟುಮಾಡುವುದು **ವಾಚಿಕದಾನ.** ಇತರರಿಗೆ ಜ್ಞಾನವನ್ನು ನೀಡುವುದು **ಬೌದ್ಧಿಕ ದಾನ.** ಇನ್ನೇನೂ ಆಗದಿದ್ದರೆ ಇತರರ ಒಳಿತಿಗಾಗಿ ಮನಸ್ಸಿನಲ್ಲಿಯೇ ಕಳಕಳಿಯಿಂದ ಪ್ರಾರ್ಥಿಸುವುದು **ಮಾನಸಿಕದಾನ.** ಇವೆಲ್ಲದರ ಹಿಂದೆ ಉದಾರತೆಯೇ ಮುಖ್ಯ ಪಾತ್ರ ವಹಿಸಬೇಕು. ದಾನದ ಕುರಿತಾಗಿ ಪರಾಶರ ಸ್ಮೃತಿ ಹೇಳುತ್ತದೆ:

**ಅಭಿಗಮ್ಯ ಉತ್ತಮಂ ದಾನಂ ಆಹೂಯೈವ ಮಧ್ಯಮಮ್ ।**
**ಅಧಮಂ ಯಾಚಮಾನಾಯ ಸೇವಾದಾನಂ ತು ನಿಷ್ಫಲಮ್ ॥**

*(೧-೨೯)*

‘‘ಆವಶ್ಯಕತೆಯುಳ್ಳವನಿಗೆ ಅದನ್ನು ಮನಗಂಡು ನಾವಾಗಿಯೇ ಮುಂದೆ ಹೋಗಿ ದಾನ ಮಾಡುವುದು ಉತ್ತಮವಾದದ್ದು. ತಾನು ಅಲುಗಾಡದೆ ಇತರರನ್ನು ಕರೆದು ದಾನ ನೀಡುವುದು ಮಧ್ಯಮವಾದದ್ದು. ವಿಶೇಷ ಸಂದರ್ಭಗಳಲ್ಲಿ ಜನರನ್ನು ಆಹ್ವಾನಿಸಿ ದಾನಮಾಡುತ್ತಾರೆ (ಫೋಟೋ ತೆಗೆಸಿಕೊಂಡು). ಇಲ್ಲಿ ಸ್ವಪ್ರತಿಷ್ಠೆಯೇ ಪ್ರಧಾನವಾಗಿರುತ್ತದೆ, ಉದಾರತೆಯಿಲ್ಲ. ದೈನ್ಯದಿಂದ ಯಾರು ಯಾಚಿಸುತ್ತ ಬರುತ್ತಾರೋ ಅವರಿಗೆ ಮಾತ್ರ ದಾನಮಾಡುವುದು ಅಧಮವಾದುದು. ಸೇವೆ ಮಾಡಿಸಿಕೊಂಡು ದಾನಮಾಡುವುದು ನಿಷ್ಫಲವಾದುದು.’’ *(ನೋಡಿ: Ishavasya Upnishad, ಸ್ವಾಮಿ ತ್ಯಾಗೀಶಾನಂದ. ಪು.೧೭೧)*



ಈ ದೃಷ್ಟಿಯಿಂದಾಗಿ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ‘‘ಬಡವರಿಗೆ ಮಾಡಿದ ದಾನವನ್ನು ಕುರಿತು ಬಡಾಯಿ ಕೊಚ್ಚುವುದಾಗಲೀ, ಅವರ ಕೃತಜ್ಞತೆಯ ನಿರೀಕ್ಷಣೆಯಾಗಲಿ ಸರ್ವಥಾ ಕೂಡದು. ಅವರಿಗೆ ದಾನ ನೀಡಲು ನಿಮಗೆ ಅವರು ಅವಕಾಶ ಕೊಟ್ಟುದಕ್ಕಾಗಿ ನೀವು ಅವರಿಗೆ ಕೃತಜ್ಞರಾಗಿರಬೇಕು.’’ *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೧, ಪು. ೬೩)*

**ಶೀಲ:** ನೈತಿಕ ಪರಿಪೂರ್ಣತೆಗೆ ಸಂಬಂಧಿಸಿದುದು. ಅಧ್ಯಾತ್ಮವು ನೀತಿಯನ್ನು ಮೀರಿದುದಾದರೂ ಅದನ್ನು ಬಿಟ್ಟಿಲ್ಲ. ಎರಡನೆಯ ತರಗತಿಗೆ ಹೋದ ಮೇಲೆ ಒಂದನೆಯ ತರಗತಿಯ ಪಾಠವನ್ನು ಮರೆಯುವಂತಿಲ್ಲ. ಜಪ, ಧ್ಯಾನಾದಿ ಆಧ್ಯಾತ್ಮಿಕ ಸಾಧನೆಗಳು ಪರಿಣಾಮಕಾರಿಯಾಗುವುದು ನೈತಿಕ ಸಾಧನೆಯೂ ಅವುಗಳೊಟ್ಟಿಗೇ ಮುಂದುವರಿದಾಗ. ಪಾಲ್ ಟಿಲಿಚ್ ಹೇಳುತ್ತಾರೆ: ''ನೈತಿಕ ಹಂತವು ದಾರಿಯ ಮಧ್ಯೆ ನಿಲ್ದಾಣವಿರುವಂತೆ. ನೈತಿಕ ಪ್ರೇರಣೆಯು ನೈತಿಕತೆಯನ್ನು ಮೀರಿ ಹೋಗುವ, ದಿವ್ಯತೆಯೊಡನೆ ಒಂದಾಗುವ, ಪ್ರೇರಣೆಯನ್ನು ಅವಲಂಬಿಸಿದೆ.'' (Morality and Beyond, P. 56) ಈ ಹೇಳಿಕೆಯು ಭಾಗವತದ ಒಂದು ಶ್ಲೋಕವನ್ನು ನೆನಪಿಗೆ ತರುತ್ತದೆ:

**ಧರ್ಮಃ ಸ್ವನುಷ್ಠಿತಃ ಪುಂಸಾಂ ವಿಶ್ವಕ್ಸೇನ ಕಥಾಸು ಯಃ ।**
**ನೋತ್ಪಾದಯೇತ್ ಯದಿ ರತಿಂ ಶ್ರಮ ಏವ ಹಿ ಕೇವಲಮ್ ॥**

''ಸರಿಯಾಗಿ ನೈತಿಕ ಜೀವನವನ್ನು ಅನುಸರಿಸಿಯೂ ಭಗವದ್ವಿಷಯಗಳಲ್ಲಿ ಪ್ರೀತಿ ಉಂಟಾಗದಿದ್ದರೆ, ಅದು ಕೇವಲ ಶ್ರಮವೇ ಸರಿ'' *(ಭಾಗವತ, ೧.೨.೮)*

**ಕ್ಷಾಂತಿ:** ತಾಳ್ಮೆಯಿಂದ ಸಾಧನೆಯನ್ನು ಮುಂದುವರಿಸುವುದು ಮತ್ತು ಸುಖದುಃಖಗಳಿಂದ ವಿಚಲಿತರಾಗದೇ ಇರುವುದು. ಇದು ಆಧ್ಯಾತ್ಮಿಕ ಜೀವನದ ಯಶಸ್ಸಿಗೆ ಅತ್ಯಂತ ಆವಶ್ಯಕ. ಕ್ಷಾಂತಿಯಿದ್ದರೆ ವೀರ್ಯ, ಅಂದರೆ ಶಕ್ತಿ ಅಥವಾ ಉತ್ಸಾಹ ವೃದ್ಧಿಯಾಗುತ್ತದೆ. ಪ್ರತಿಯೊಂದು ವಿಷಯದಲ್ಲಿಯೂ ನಾವು ಸಹನೆ ಕಳೆದುಕೊಳ್ಳುತ್ತಿದ್ದರೆ ಅಂತಃಶಕ್ತಿ ಕುಂದುತ್ತದೆ, ಉತ್ಸಾಹ ಕುಂಠಿತವಾಗುತ್ತದೆ. ಕ್ಷಾಂತಿಯಿದ್ದಾಗ ಉತ್ಸಾಹ ಕುಂದದೆ ಸಾಧನೆ ಮಾಡುವ ಸಾಮರ್ಥ್ಯ ಬರುತ್ತದೆ. ಇವೆಲ್ಲವೂ ಇದ್ದಾಗಲೇ ಧ್ಯಾನವು ಸಾಧ್ಯವಾಗುವಂತಹುದು. ಧ್ಯಾನದಿಂದ ಅನುಭಾವಾತ್ಮಕ ಜ್ಞಾನ (wisdom) ಉಂಟಾಗುತ್ತದೆ, ಆಧ್ಯಾತ್ಮಿಕ **ಪ್ರಜ್ಞೆ** ಜಾಗೃತವಾಗುತ್ತದೆ.

## ಮತಾಂಧತೆ

**ಶ್ರೀರಾಮಕೃಷ್ಣರು:** ''ಅಂತರಂಗ ಶುದ್ಧವಾಗಿತ್ತು ಎಂದರೆ, ಎಲ್ಲ ಧರ್ಮಗಳ ಮೂಲಕವೂ ಭಗವಂತನನ್ನು ಪಡೆದುಕೊಳ್ಳಬಹುದು. ವೈಷ್ಣವರಿಗೂ ಭಗವಂತ ದೊರೆಯುತ್ತಾನೆ. ಬ್ರಾಹ್ಮ ಭಕ್ತರಿಗೂ ದೊರೆಯುತ್ತಾನೆ. ವೇದಾಂತವಾದಿಗಳಿಗೂ ದೊರೆಯುತ್ತಾನೆ. ಮುಸಲ್ಮಾನ, ಕ್ರಿಶ್ಚಿಯನ್ನರಿಗೂ ಆತ ದೊರೆಯುತ್ತಾನೆ. ಹೃತ್ಪೂರ್ವಕ ಮನಸ್ಸು ಇತ್ತು ಎಂದರೆ ಎಲ್ಲರಿಗೂ ಆತ ದೊರೆಯುತ್ತಾನೆ.

''ಕೆಲವರು ಜಗಳವಾಡುತ್ತಾರೆ: 'ನಮ್ಮ ಶ್ರೀಕೃಷ್ಣನನ್ನು ಭಜಿಸದಿದ್ದರೆ ಏನೂ ದೊರೆಯದು' ಅಥವಾ 'ನಮ್ಮ ಭಗವತಿ ಕಾಳಿಯನ್ನು ಭಜಿಸದಿದ್ದರೆ ಏನೂ ದೊರೆಯದು', ಅಥವಾ 'ಕ್ರೈಸ್ತ ಧರ್ಮವನ್ನು ಒಪ್ಪಿಕೊಳ್ಳಲಿಲ್ಲ ಎಂದರೆ ಯಾರೂ ಉದ್ಧಾರವಾಗುವ ಹಾಗೆಯೇ ಇಲ್ಲ'. ಇದು ಶುದ್ಧ ಮತಾಂಧ ಶ್ರದ್ಧೆಯೇ. 'ನನ್ನ ಧರ್ಮವೇ ಸರಿ, ಉಳಿದವರದೆಲ್ಲ ತಪ್ಪು' ಎಂದು ಹೇಳುವುದು ಬಹಳ ಕೆಟ್ಟದ್ದು. ಭಗವಂತನನ್ನು ವಿವಿಧ ಮಾರ್ಗಗಳಿಂದ ಮುಟ್ಟಬಹುದು.'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೫೫)*

ಈ ಮತಾಂಧತೆಯು ಧರ್ಮದ ಬಗ್ಗೆ ಅಸಹ್ಯ ಭಾವನೆ ಉಂಟಾಗುವಂತೆ ಮಾಡಿದೆ. ದೇವರನ್ನು ಕ್ರೂರಿಯನ್ನಾಗಿ ಮಾಡಿದೆ. ಮನುಷ್ಯನೊಳಗೆ ಆಗಲೇ ಇರುವ ಕ್ರೌರ್ಯಾಗ್ನಿಗೆ ಇದು ತುಪ್ಪ ಸುರಿಯುತ್ತದೆ. ಬಸವಣ್ಣನವರು ಹೇಳುತ್ತಾರೆ: ''ದಯೆಯೇ ಧರ್ಮದ ಮೂಲವಯ್ಯಾ, ದಯೆಯಿಲ್ಲದ ಧರ್ಮ ಅದೇವುದಯ್ಯಾ ?'' ದಯೆಯಿಲ್ಲದ ಧರ್ಮ ಧರ್ಮವೇ ಅಲ್ಲ ಎಂಬುದು ಅವರ ಅಭಿಪ್ರಾಯ. ಮತಾಂಧತೆಯು Saviour Complex ನ (ಇತರರನ್ನು ಉದ್ಧಾರ ಮಾಡಬೇಕೆಂಬ ಹುಂಬತನ) ವಿಕೃತ ರೂಪ.

ಈ ಮತಾಂಧತೆಯನ್ನು ಕುರಿತಾಗಿ ಸ್ವಾಮಿ ವಿವೇಕಾನಂದರು ಹೇಳುತ್ತಾರೆ.

''ಪ್ರತಿಯೊಂದು ದೇಶದಲ್ಲಿ ಮತ್ತು ಧರ್ಮದಲ್ಲಿ ಇರುವ ದುರ್ಬಲ, ಅಪ್ರಬುದ್ಧ ಜನರು ತಮ್ಮ ಇಷ್ಟದೇವತೆಯನ್ನು ಈ ಒಂದು ರೀತಿಯಲ್ಲಿ ಪ್ರೀತಿಸಬಲ್ಲರು – ಅನ್ಯರ ಆದರ್ಶಗಳನ್ನು ತೆಗಳುವುದರ ಮೂಲಕ. ತಮ್ಮ ಇಷ್ಟದೇವತೆಯ ಮೇಲೆ ಅಷ್ಟೊಂದು ಆಸಕ್ತಿಯಿಂದ ಕೂಡಿದವನು, ತಮ್ಮ ಧರ್ಮದ ಮೇಲೆ ಅಷ್ಟೊಂದು ಶ್ರದ್ಧೆ ಭಕ್ತಿ ಇರುವನು, ಇತರರ ಆದರ್ಶವನ್ನು ಕೇಳಿದರೆ ಸಾಕು, ಕಂಡರೆ ಸಾಕು, ಕಿಡಿ ಕಿಡಿ ಕಾರುತ್ತಾ ಕೂಗಾಡುವ ಧರ್ಮಾಂಧನಾಗುವನು. ಇಂತಹ ಪ್ರೀತಿಯನ್ನು ಯಜಮಾನನ ಆಸ್ತಿಯನ್ನು ಮತ್ತೊಬ್ಬರು ದೋಚಿಕೊಂಡು ಹೋಗದಿರಲಿ ಎಂದು ಕಾಯುವ ನಾಯಿಯ ಸ್ವಭಾವಕ್ಕೆ ಹೋಲಿಸಬಹುದು. ನಾಯಿಯ ಹುಟ್ಟುಗುಣವು ಮನುಷ್ಯನ ಯುಕ್ತಿಗಿಂತ ಮೇಲು, ಅಷ್ಟೆ. ಏಕೆಂದರೆ ಯಜಮಾನ ಯಾವ ವೇಷದಲ್ಲೇ ಬರಲಿ ಅದು ಆತನನ್ನು ಕಂಡು ಹಿಡಿಯುವುದು, ಅವನು ವೈರಿ ಎಂದು ತಪ್ಪು ತಿಳಿದುಕೊಳ್ಳುವುದಿಲ್ಲ.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೧.ಪು.೧೮೭)*

**ಶ್ರೀರಾಮಕೃಷ್ಣರು:** ''ಒಮ್ಮೆ ಕೆಲವು ಮಂದಿ ಕುರುಡರು ಒಂದು ಆನೆಯ ಹತ್ತಿರಕ್ಕೆ ಬಂದು ಸೇರಿದರು. ಯಾರೋ ಒಬ್ಬ ಅವರಿಗೆ ತಿಳಿಸಿದ, ಆ ಪ್ರಾಣಿಯ ಹೆಸರು ಆನೆ ಎಂಬುದಾಗಿ. ಆನೆ ಅವರಿಗೆ ಹೇಗೆ ತೋರಿ ಬರುತ್ತದೆ ಎಂದು ಆ ಕುರುಡರಿಗೆ ಪ್ರಶ್ನಿಸಲಾಗಿ ಅವರು ಅದನ್ನು ಮುಟ್ಟಿ ನೋಡಲಾರಂಭಿಸಿದರು. ಒಬ್ಬ ಹೇಳಿದ, ಆನೆ ಕಂಬದ ಹಾಗೆ ಇದೆ ಎಂದು. ಆತ ಅದರ ಕಾಲನ್ನು ಮಾತ್ರ ಮುಟ್ಟಿ ನೋಡಿದ್ದ. ಇನ್ನೊಬ್ಬ ಹೇಳಿದ, ಅದು ಮೊರದ ಹಾಗೆ ಇದೆ ಅಂತ. ಆತ ಅದರ ಕಿವಿಯನ್ನು ಮಾತ್ರ ಮುಟ್ಟಿ ನೋಡಿದ್ದ. ಈ ರೀತಿ ಸೊಂಡಿಲು ಹೊಟ್ಟೆ ಇತ್ಯಾದಿ

ಮುಟ್ಟಿದವರು ಬೇರ ಬೇರೆ ರೀತಿಯಾಗಿ ಹೇಳಲಾರಂಭಿಸಿದರು. ಇದರ ಹಾಗೆ ಯಾರ‍್ಯಾರು ಭಗವಂತನನ್ನು ಯಾವ್ಯಾವ ರೀತಿಯಾಗಿ ನೋಡಿದ್ದಾರೊ ಅವರು ಭಾವಿಸುತ್ತಾರೆ ಭಗವಂತ ತಾವು ನೋಡಿದ ರೀತಿಯಲ್ಲದೆ ಬೇರೆ ಯಾವ ರೀತಿಯಲ್ಲಿಯೂ ಇಲ್ಲವೇ ಇಲ್ಲ ಎಂಬುದಾಗಿ.'' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು.೧೫೬)*

ವೇದಾಂತದ ದೃಷ್ಟಿಯಿಂದ ಹೇಳುವುದಾದರೆ: ಕುರುಡರಿಗೆ ಆನೆಯು ಕಾಣಿಸದೇ ಇರುವುದು **ಆವರಣ** ಮತ್ತು ಇದಕ್ಕೆ ಕಾರಣ **ಅಜ್ಞಾನ**ದ ಕುರುಡುತನ. ಸತ್ಯವು ಬರಿ ಕಾಣಿಸಿಕೊಳ್ಳದಿರುವುದು ಮಾತ್ರವಲ್ಲದೆ ಅದು ಬೇರೆ ರೀತಿಯಾಗಿ ಕಾಣಿಸಿಕೊಳ್ಳುತ್ತದೆ – ಕುರುಡರಿಗೆ ಆನೆಯು ಕಂಬದಂತೆಯೂ, ಮೊರದಂತೆಯೂ ಕಾಣಿಸಿಕೊಂಡಂತೆ. ಇದು **ವಿಕ್ಷೇಪ.** ಯಾರೋ ಒಬ್ಬರು ಬಂದು ಆ ಕುರುಡರಿಗೆ ಹೇಳುತ್ತಾರೆ, ಆನೆಯು ಕಂಬದಂತೆಯೂ ಇಲ್ಲ, ಮೊರದಂತೆಯೂ ಇಲ್ಲ, ಗೋಡೆಯಂತೆಯೂ ಇಲ್ಲ, ನೀವು ತಿಳಿದಂತೆ ಇನ್ನಾವ ರೂಪದಲ್ಲಿಯೂ ಇಲ್ಲ ಎಂಬುದಾಗಿ. ನಿಮ್ಮ ಎಲ್ಲ ವಿವರಣೆಯನ್ನು ಸೇರಿಸಿದರೂ ಆನೆಯಾಗುವುದಿಲ್ಲ. ಆ ವ್ಯಕ್ತಿಯೂ ಆನೆಯು ಹೇಗಿರುತ್ತದೆ ಎಂದು ಎಷ್ಟೇ ವಾಸ್ತವವಾಗಿ ತಿಳಿಸಿಕೊಟ್ಟರೂ ಆನೆಯ ನಿಜವಾದ ರೂಪವನ್ನು ಆ ಕುರುಡರಿಗೆ ಕಲ್ಪಿಸಿಕೊಳ್ಳಲು ಸಾಧ್ಯವೆ? ಹಾಗೆಯೇ ಶಾಸ್ತ್ರ ಮತ್ತು ಗುರೂಪದೇಶಗಳ ಮೂಲಕ ನಾವು ಸತ್ಯದ **ಪರೋಕ್ಷ** ಜ್ಞಾನವನ್ನು ಪಡೆಯುತ್ತೇವೆ, ಸತ್ಯದ ನಿಜಸ್ವರೂಪವನ್ನು ತಿಳಿಯಲಾಗುವುದಿಲ್ಲ. ಸತ್ಯದ ಬಗ್ಗೆ ಯಾವುದೇ ವಿವರಣೆಯೂ ಸತ್ಯಕ್ಕೆ ಅನ್ವಯವಾಗುವುದಿಲ್ಲ. ಸತ್ಯದ ಸ್ವರೂಪವನ್ನು ಅನುಭವಿಸಿಯೇ ತಿಳಿಯಬೇಕು. ಇದೇ **ಅಪರೋಕ್ಷ ಜ್ಞಾನ.** ಆ ಕುರುಡರಿಗೆ ದೈವಾನುಗ್ರಹದಿಂದ ಹೊಸ ದೃಷ್ಟಿ ಬಂದರೆ, ಆಗ ಅವರಿಗೆ ನಿಜವಾದ ಆನೆಯ ರೂಪ ದೃಗ್ಗೋಚರವಾಗುತ್ತದೆ; ನೋಡಿ ಪರಮಾಶ್ಚರ್ಯವಾಗುತ್ತದೆ. ಹಾಗೆಯೇ ಸಾಧನೆಯ ಮೂಲಕ ಸತ್ಯದ ಯಥಾರ್ಥ ಅನುಭವವಾದಾಗಲೇ ಆ ಪರಮಾರ್ಥ ಸತ್ಯವೇನೆಂಬುದು ತಿಳಿದುಬರುವುದು. ಆಗ **ದುಃಖ ನಿವೃತ್ತಿ.** ಮತ್ತು ಆತ್ಯಂತಿಕ **ತೃಪ್ತಿ .** ಇವುಗಳನ್ನು ಅವಸ್ಥಾಸಪ್ತಕಗಳೆಂದು ಪಂಚದಶಿಕಾರರು ಕರೆಯುತ್ತಾರೆ *(ಪಂಚದಶೀ, ೭–೨೮).* ಸಿಂಹವು ತನ್ನ ಕುರಿತ್ವವನ್ನು ಬಿಟ್ಟು ತಾನು ಸಿಂಹ ಎಂದರಿತು ತೃಪ್ತಿಯನ್ನು ಪಡೆದು ದೈನ್ಯತೆಯನ್ನು ಕಳೆದುಕೊಂಡ ಹಾಗೆ.

### ಹೋಮಾ ಪಕ್ಷಿ

ರಾಖಾಲನ ಬಗ್ಗೆ ಮಾತನಾಡುತ್ತ ಶ್ರೀರಾಮಕೃಷ್ಣರು ಹೇಳಿದರು: ''ಈ ವಿಧದ ಹುಡುಗರು ನಿತ್ಯಸಿದ್ಧರ ಗುಂಪಿಗೆ ಸೇರಿದವರು. ಬ್ರಹ್ಮಜ್ಞಾನವಿಟ್ಟುಕೊಂಡೇ ಜನ್ಮ ತಳೆದಿದ್ದಾರೆ. ಸ್ವಲ್ಪ ವಯಸ್ಸಾಯಿತು ಎಂದರೆ ಅವರಿಗೆ ಗೊತ್ತಾಗಿಬಿಡುತ್ತದೆ, ಸಂಸಾರದ ಸ್ಪರ್ಶವೇನಾದರೂ ಶರೀರಕ್ಕೆ ತಾಗಿತು ಎಂದರೆ ಬದುಕುವ ಹಾಗಿಲ್ಲ ಎಂಬುದಾಗಿ. ವೇದದಲ್ಲಿ ಹೋಮಾಪಕ್ಷಿಯ ಕಥೆ ಇದೆ. ಆ ಪಕ್ಷಿ ಆಕಾಶದಲ್ಲಿಯೇ ವಾಸವಾಗಿರುತ್ತದೆ. ಭೂಮಿಯ ಮೇಲಕ್ಕೆ ಎಂದಿಗೂ ಇಳಿಯಲಾರದು. ಅದು ಆಕಾಶದಲ್ಲೇ ಮೊಟ್ಟೆ ಇಡುತ್ತದೆ. ಆ ಮೊಟ್ಟೆ ಬೀಳುತ್ತಲೇ ಇರುತ್ತದೆ. ಆ ಹಕ್ಕಿ ಎಷ್ಟು ಎತ್ತರದಲ್ಲಿ ವಾಸಿಸುತ್ತದೆ. ಮೊಟ್ಟೆ ಬೀಳುತ್ತ ಬೀಳುತ್ತಲೇ ಬಿರಿದು ಮರಿಯಾಗುತ್ತದೆ. ಬಳಿಕ ಮರಿ ಬೀಳಲಾರಂಭಿಸುತ್ತದೆ. ಅದು ಬೀಳುತ್ತ ಬೀಳುತ್ತ ಅದಕ್ಕೆ ರೆಕ್ಕೆ ಹುಟ್ಟುತ್ತದೆ. ಕಣ್ಣು ತೆರೆಯುತ್ತದೆ. ಆಗ ಅದರ ಅರಿವಿಗೆ ಬರುತ್ತದೆ, ತಾನು ಇನ್ನೇನು ಭೂಮಿಯ ಮೇಲೆ ಬೀಳುವುದರಲ್ಲಿದ್ದೇನೆ; ಬಿದ್ದರೆ ಒಡನೆಯೇ ಮೃತ್ಯು ಎಂಬುದಾಗಿ. ಭೂಮಿ ಕಣ್ಣಿಗೆ ಬಿತ್ತೊ ಇಲ್ಲವೊ ಒಡನೆ ಮೇಲಕ್ಕೆ ತಿರುಗಿ 'ಸೊಯ್ಯ್' ಅಂತ ತಾಯಿಯ ಕಡೆಗೆ ಹಾರಿಹೋಗುತ್ತದೆ. ಆದರೆ ಅದರ ಏಕಮಾತ್ರ ಗುರಿ ತಾಯಿಯನ್ನು ಮುಟ್ಟುವುದು.'' *(ಅಲ್ಲೇ, ಪು.೧೫೭)*

ಮೊಟ್ಟೆ ಮತ್ತು ಹಕ್ಕಿ ಕೆಳಗೆ ಬೀಳುವುದು ಗುರುತ್ವಾಕರ್ಷಣೆಯಿಂದ. ಹಾಗೆಯೇ ಪ್ರಾಪಂಚಿಕ ಆಕರ್ಷಣೆಯಿಂದಲೇ ನಾವು ಕೆಳಗೆ ಬೀಳುವುದು. ಹಕ್ಕಿಯು ಭೂಮಿಯನ್ನು ಸ್ಪರ್ಶಿಸುವುದೆಂದರೆ ಪ್ರಾಪಂಚಿಕತೆಯಲ್ಲಿ ಮುಳುಗಿ ನಮ್ಮನ್ನು ನಾವು ಕಳೆದುಕೊಳ್ಳುವುದು. ಎಲ್ಲ ಆಧ್ಯಾತ್ಮಿಕ ಸಾಧಕರಿಗೂ ಇದು ಅನ್ವಯಿಸುತ್ತದೆ. ಒಂದು ಪ್ರಾಪಂಚಿಕ ಆಲೋಚನೆ ಬಂದಾಕ್ಷಣ ಮನಸ್ಸು ಭಗವಂತನೆಡೆಗೆ ಹಾರಿಹೋಗುವಂತೆ ಮಾಡಬೇಕು. ಆಲೋಚನೆಯೊಂದಿಗೆ ಭಾವವು ಸೇರಿಕೊಂಡರೆ ಸಂಸ್ಕಾರವಾಗಿ ಬಿಡುತ್ತದೆ. ಭಾವವು ಸೇರುವುದಕ್ಕೆ ಮುಂಚೆಯೇ ಮನಸ್ಸನ್ನು ಮೇಲಕ್ಕೆ ಭಗವಂತನೆಡೆಗೆ ಹಾರಿಸಬೇಕು. ಅದು ಸಂಸ್ಕಾರ ಅಥವಾ ವಾಸನೆಯ ರೂಪವನ್ನು ತಾಳದಂತೆ ನೋಡಿಕೊಳ್ಳಬೇಕು.

**ಚಿತ್ತಗತಸಂಸ್ಕಾರೋ ವಾಸನಾ, ಪೂರ್ವಪೂರ್ವ ಅಭ್ಯಾಸೇನ ಚಿತ್ತೇ ವಾಸ್ಯಮಾನತ್ವಾತ್ ।**

''ಮನಸ್ಸಿನಲ್ಲಿ ಉಂಟಾಗಿರುವ ಸಂಸ್ಕಾರವೇ ವಾಸನಾ; ಹಿಂದುಹಿಂದಿನ ಅಭ್ಯಾಸದಿಂದ ಮನಸ್ಸಿನಲ್ಲಿ ವಾಸವಾಗಿರುವುದರಿಂದ ಅದನ್ನು 'ವಾಸನೆ' ಎಂದು ಕರೆಯುತ್ತಾರೆ.'

**ದೃಢಭಾವನಯಾ ತ್ಯಕ್ತ ಪೂರ್ವಾಪರವಿಚಾರಣಮ್ ।**
**ಯದಾದದಾನಂ ಪದಾರ್ಥಸ್ಯ ವಾಸನಾ ಸಾ ಪ್ರಕೀರ್ತಿತಾ ॥**

''(ಆಸೆಪಟ್ಟ ವಸ್ತುವನ್ನು) ದೃಢವಾಗಿ ಭಾವಿಸುವುದರ ದೆಸೆಯಿಂದ, ಪೂರ್ವಾಪರ ವಿಚಾರವನ್ನು ಬಿಟ್ಟು, ಆ ವಸ್ತುವನ್ನು ಅನುಭವಿಸುವುದನ್ನೇ 'ವಾಸನಾ' ಎಂದು ಕರೆಯಲಾಗಿದೆ'' ಈ ರೀತಿಯ ದೃಢಭಾವನೆ ಮತ್ತು ಪ್ರಾಣಸ್ಪಂದನೆ – ಇವೆರಡು ವೃತ್ತಿಯೆಂಬ ಬಳ್ಳಿಯಿಂದ ಕೂಡಿರುವ ಚಿತ್ತವೃಕ್ಷಕ್ಕೆ ಬೀಜಗಳು ಎಂದು ಯೋಗವಾಸಿಷ್ಠವು ಹೇಳುತ್ತದೆ:

**ದ್ವೇ ಬೀಜೇ ಚಿತ್ತವೃಕ್ಷಸ್ಯ ವೃತ್ತಿವ್ರತತಿಧಾರಿಣಃ ।**
**ಏಕಂ ಪ್ರಾಣಪರಿಸ್ಪಂದಃ ದ್ವಿತೀಯಂ ದೃಢಭಾವನಾ ॥**

*(ಮುಂದುವರಿಯುವುದು)*